# ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ–ಸೆಟ್)

**KARNATAKA STATE ELIGIBILITY TEST (K-SET)**
**FOR ASSISTANT PROFESSOR**

## SYLLABUS

Subject: **GENERAL PAPER ON TEACHING & RESEARCH APTITUDE**

Subject Code: **00**

## PAPER – I

The main objective is to assess the teaching and research capabilities of the candidates. The test aims at assessing the teaching and research aptitude as well. Candidate are expected to possess and exhibit cognitive abilities, which include comprehension, analysis, evaluation, understanding the structure of arguments, deductive and inductive reasoning. The candidates are expected to have a general awareness about teaching and learning processes in higher education system. Further, they should be aware of interaction between people, environment, natural resources and their impact on the quality of life.

The details of syllabi are as follows:

### Unit – I Teaching Aptitude

- Teaching: Concept, Objectives, Levels of teaching (Memory, Understanding and Reflective), Characteristics and basic requirements.
- Learner's characteristics: Characteristics of adolescent and adult learners (Academic, Social, Emotional and Cognitive), Individual differences.
- Factors affecting teaching related to: Teacher, Leaner, Support material, Instructional facilities, Learning environment and Institution.



WWW.SHIKARAT.COM

- Methods of teaching in Institutions of higher learning: Teacher centred vs. Learner centred methods; Off-line vs. On-line methods (Swayam, Swayamprabha, MOOCs etc.).
- Teaching Support System: Traditional, Modern and ICT based.
- Evaluation Systems: Elements and Types of evaluation, Evaluation in Choice Based Credit System in Higher education, Computer based testing, Innovations in evaluation systems.

**Unit – II Research Aptitude**

- Research: Meaning, Types, and Characteristics, Positivism and Post-positivistic approach to research.
- Methods of Research: Experimental, Descriptive, Historical, Qualitative and Quantitative methods.
- Steps of Research.
- Thesis and Article writing: Format and Styles of referencing.
- Application of ICT in research.
- Research ethics.

**Unit - III Comprehension**

- A passage of text be given. Questions be asked from the passage to be answered.

**Unit – IV Communication**

- Communication: Meaning, types and characteristics of communication.
- Effective communication: Verbal and Non-verbal, Inter-Cultural and group communications, Classroom communication.



WWW.SHIKARAT.COM

- Barriers to effective communication.
- Mass-Media and Society.

**Unit-V Mathematical Reasoning and Aptitude**

- Types of reasoning.
- Number series, Letter series, Codes and Relationships.
- Mathematical Aptitude (Fraction, Time & Distance, Ratio, Proportion and Percentage, Profit and Loss, Interest and Discounting, Averages etc.).

**Unit – VI Logical Reasoning**

- Understanding the structure of arguments: arguments forms, structure of categorical propositions, Mood and Figure, Formal and Informal fallacies, Uses of language, Connotations and denotations of terms, Classical square of opposition.
- Evaluating and distinguishing deductive and inductive reasoning.
- Analogies.
- Venn diagram: Simple and multiple use for establishing validity of arguments.
- Indian Logic: Means of knowledge.
- Pramanas: Pratyaksha (Perception), Anumana (Inference), Upamana (Comparison), Shabda (Verbal testimony), Arthapatti (Implication) and Anupalabddhi ( Non-apprehension).
- Structure and kinds of Anumana (inference), Vyapti (invariable relation), Hetvabhasas (fallacies of inference).



WWW.SHIKARAT.COM

**Unit-VII Data Interpretation**

- Sources, acquisition and classification of Data.
- Quantitative and Qualitative Data.
- Graphical representation (Bar-chart, Histograms, Pie-chart, Table-chart and Line-chart) and mapping of Data.
- Data Interpretation.
- Data and Governance.

**Unit-VIII Information and Communication Technology (ICT)**

- ICT: General abbreviations and terminology.
- Basics of Internet, Intranet, E-mail, Audio and Video-conferencing.
- Digital initiatives in higher education.
- ICT and Governance.

**Unit-IX People, Development and Environment**

- Development and environment: Millennium development and Sustainable development goals.
- Human and environment interaction: Anthropogenic activities and their impacts on environment.
- Environmental Issues: Local, Regional and Global; Air pollution, Water pollution, Soil pollution, Noise pollution, Waste (solid, liquid, biomedical, hazardous, electronic), Climate change and its Socio-Economic and Political dimensions.
- Impacts of pollutants on human health.
- Natural and energy resources: Solar, Wind, Soil, Hydro, Geothermal, Biomass, Nuclear and Forests.
- Natural hazards and disasters: Mitigation strategies.



WWW.SHIKARAT.COM

- Environmental Protection Act (1986), National Action Plan on Climate change, International agreements/efforts –Montreal Protocol, Rio Summit, Convention on Biodiversity, Kyoto Protocol, Paris Agreement, International Solar Alliance.

**Unit – X Higher Education System**

- Institutions of higher learning and education in ancient India.
- Evolution of higher learning and research in Post Independence India.
- Oriental, Conventional and Non-conventional learning programmes in India.
- Professional, Technical and Skill Based education.
- Value education and environmental education.
- Polices, Governance, and Administration.

**NOTE:** **(i) Five questions each carrying 2 marks are to be set from each Module.**

**(ii) Whenever graphical/pictorial question(s) are set for sighted candidates, a passage followed by equal number of questions and weightage be set for visually impaired candidates.**



WWW.SHIKARAT.COM

ಕರ್ನಾಟಕ ಸರ್ಕಾರ

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012**

ಸಂಖ್ಯೆ : ಇಡಿ/ಕೆಇಎ/ಕೆಸೆಟ್/2025 **ದಿನಾಂಕ:** 22–08–2025

**ಅಧಿಸೂಚನೆ**

**ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆಸೆಟ್) – 2025**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಇಸಿ 2025 ದಿನಾಂಕ:19.05.2025 ಹಾಗೂ ಯುಜಿಸಿ–ನೆಟ್ ಬ್ಯೂರೋ ನವದೆಹಲಿ ರವರ ಪತ್ರ ಸಂಖ್ಯೆ:ಎಸ್.7–16/2012(ನೆಟ್/ಸೆಟ್) ದಿನಾಂಕ:06.09.2023 ರ ನಿರ್ದೇಶನದಂತೆ, ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ–2025 (ಕೆಸೆಟ್–2025) ಅನ್ನು **02.11.2025 (ಭಾನುವಾರ)** ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲು ಯೋಜಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ. ಕೆಸೆಟ್–2025 ಪರೀಕ್ಷೆಯ ವೇಳಾಪಟ್ಟಿ ಈ ಕೆಳಗಿನಂತಿದೆ.

| | | | |
|---|---|---|---|
| 1) | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಪ್ರಾರಂಭದ ದಿನಾಂಕ | : | 28.08.2025 |
| 2) | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕ | : | 18.09.2025 |
| 3) | ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ | : | 19.09.2025 |
| 4) | ಪ್ರವೇಶ ಪತ್ರ (Hall Ticket) ಬಿಡುಗಡೆ ದಿನಾಂಕ | : | 24.10.2025 |
| 5) | ಪರೀಕ್ಷಾ ದಿನಾಂಕ | : | 02.11.2025 |

ಅಭ್ಯರ್ಥಿಗಳು ಕೆಸೆಟ್–2025ಕ್ಕೆ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದು. ಯಾವುದೇ ಇತರ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ಕೆಇಎ ವೆಬ್‌ಸೈಟ್ https://cetonline.karnataka.gov.in/kea/ ಅನ್ನು ಪ್ರವೇಶಿಸುವ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ.

**ಅರ್ಜಿಯನ್ನು ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಈ ಅಧಿಸೂಚನೆಯನ್ನು ಗಮನವಿಟ್ಟು ಓದಿ ನಂತರ ಅರ್ಜಿಯನ್ನು ಭರ್ತಿಮಾಡಬೇಕು.**

- ಕೆಸೆಟ್ (KSET) 2025ರ ಪರೀಕ್ಷೆಯನ್ನು **33** ವಿಷಯಗಳಲ್ಲಿ ನಡೆಸಲಾಗುತ್ತಿದ್ದು, ಪರೀಕ್ಷಾ ಕೇಂದ್ರಗಳ ವಿವರಗಳನ್ನು ಪುಟ ಸಂಖ್ಯೆ: 7 ಮತ್ತು 8 ರಲ್ಲಿ ನೀಡಲಾಗಿದೆ.
- ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯ / ಪ್ರಥಮ ದರ್ಜೆ ಪದವಿ ಕಾಲೇಜು / ಉನ್ನತ ಶಿಕ್ಷಣ ಸಂಸ್ಥೆ (ಸರ್ಕಾರಿ, ಅನುದಾನಿತ ಮತ್ತು ಖಾಸಗಿ) ಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇಮಕಗೊಳ್ಳಲು ಅರ್ಹರಾಗಿರುತ್ತಾರೆ ಹಾಗೂ ಆಯಾ ಸಂಸ್ಥೆಗಳ ನಿಯಮ ಮತ್ತು ಕಾಯ್ದೆಗಳಿಗೆ ಒಳಪಟ್ಟಿರುತ್ತಾರೆ.
- ವಿಕಲಚೇತನ (PwD), ತೃತೀಯ ಲಿಂಗ, ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ಮತ್ತು ಇತರೆ ಹಿಂದುಳಿದ ವರ್ಗದ (ಪ್ರವರ್ಗ–I, IIA, IIB, IIIA, ಮತ್ತು IIIB) ಅಭ್ಯರ್ಥಿಗಳು, ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗದವರ https://bcwd.karnataka.gov.in/ ಪಟ್ಟಿಯಲ್ಲಿರುವಂತಿರಬೇಕು.

I) **ಅರ್ಹತಾ ನಿಬಂಧನೆಗಳು :**

1) ಅಭ್ಯರ್ಥಿಗಳು ಯು.ಜಿ.ಸಿ ಯಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾನಿಲಯ / ಉನ್ನತ ಶಿಕ್ಷಣ ಸಂಸ್ಥೆಯಿಂದ ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಗಳಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಶೇ.55% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು. ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ಇತರೆ ಹಿಂದುಳಿದ ಅಭ್ಯರ್ಥಿಗಳು (ಪ್ರವರ್ಗ–I, IIA, IIB, IIIA, IIIB), ವಿಶೇಷಚೇತನರು (PwD) ಮತ್ತು ತೃತೀಯ ಲಿಂಗ ಗುಂಪಿಗೆ ಸೇರಿದ ಅಭ್ಯರ್ಥಿಗಳು ಶೇ.50% ರಷ್ಟು (ಪೂರ್ಣಾಂಕಿತ ಗೊಳಿಸಿರಬಾರದು) ಅಂಕಗಳನ್ನು ಪಡೆದಿರಬೇಕು.

2) ಸ್ನಾತಕೋತ್ತರ ಪದವಿ ಪಡೆದವರು ಹಾಗೂ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ (ಪ್ರಥಮ ಮತ್ತು ದ್ವಿತೀಯ) ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಆದರೆ, ಪ್ರಸ್ತುತ ವ್ಯಾಸಾಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ತಾತ್ಕಾಲಿಕವಾಗಿ ಮಾತ್ರ ಪ್ರವೇಶ ನೀಡಲಾಗುವುದು. ಅವರು ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಯನ್ನು, ಸಾಮಾನ್ಯ ವರ್ಗದವರು ಶೇ.55% ರಷ್ಟು ಹಾಗೂ ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡ (ST), ಪ್ರವರ್ಗ–I, IIA, IIB, IIIA, ಮತ್ತು IIIB, ವಿಕಲಚೇತನರು (PwD) ಮತ್ತು ತೃತೀಯ ಲಿಂಗದ ಅಭ್ಯರ್ಥಿಗಳು, ಶೇ. 50% ರಷ್ಟು ಅಂಕ ಪಡೆದು, ಅರ್ಹತೆ ಹೊಂದಿ **ಕೆಸೆಟ್ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ ದಿನಾಂಕದಿಂದ ಎರಡು ವರ್ಷದೊಳಗಾಗಿ** ಅವರ

SHIKARAT.COM

ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳನ್ನು ಸಲ್ಲಿಸಿದರೆ ಮಾತ್ರ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪ್ರಮಾಣ ಪತ್ರ ಪಡೆಯಬಹುದು. ಇಲ್ಲವಾದಲ್ಲಿ ಅಂತಹವರ ಅರ್ಹತೆಯನ್ನು ರದ್ದುಪಡಿಸಲಾಗುವುದು.

3) ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿದ ವಿಷಯದಲ್ಲಿಯೇ ಅಭ್ಯರ್ಥಿಗಳು ಕೆಸೆಟ್ (KSET) ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. **ಪ್ರಸ್ತುತ ಕೆಸೆಟ್-2025 ಅಧಿಸೂಚನೆಯಲ್ಲಿ ಇಲ್ಲದಿರುವ ವಿಷಯಗಳಿಗೆ, ಅಭ್ಯರ್ಥಿಗಳು ವರ್ಷದಲ್ಲಿ ಎರಡು ಬಾರಿ ನಡೆಯುವ ಯು.ಜಿ.ಸಿ, ಎನ್.ಇ.ಟಿ ಅಥವಾ ಯು.ಜಿ.ಸಿ-ಸಿ.ಎಸ್.ಐ.ಆರ್-ಎನ್.ಇ.ಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.**

4) 1991ರ ಸೆಪ್ಟೆಂಬರ್ 19 ರೊಳಗೆ ಸ್ನಾತಕೋತ್ತರ ಪರೀಕ್ಷೆಯನ್ನು ಪೂರ್ಣಗೊಳಿಸಿ (ಫಲಿತಾಂಶ ಘೋಷಣೆಯ ದಿನಾಂಕವನ್ನು ಲೆಕ್ಕಿಸದೆ) ಹಾಗೂ ಪಿ.ಹೆಚ್.ಡಿ ಪದವಿ ಪಡೆದವರು ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಒಟ್ಟು ಅಂಕಗಳಲ್ಲಿ 5% ವಿನಾಯಿತಿ ಇರುತ್ತದೆ (55%ರ ಬದಲಾಗಿ 50%).

5) ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಮೀಸಲಾತಿಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿಯೇ ಸ್ಪಷ್ಟವಾಗಿ ನಮೂದಿಸಬೇಕು. SC, ST, CAT-1, IIA, IIB, IIIA, ಮತ್ತು IIIB ಅಭ್ಯರ್ಥಿಗಳು **ಸಕ್ಷಮ ಪ್ರಾಧಿಕಾರಗಳು ನೀಡುವ ಪ್ರವರ್ಗ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು.** ಈ ಅಭ್ಯರ್ಥಿಗಳ ಪ್ರಮಾಣ ಪತ್ರಗಳು ಯಾವುದೇ ಹಂತದಲ್ಲಾದರೂ, ಸುಳ್ಳು ಎಂದು ಸಾಬೀತಾದರೆ ಅವರ ಅಭ್ಯರ್ಥಿತ್ವವನ್ನು ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುತ್ತದೆ ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. **ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರದ ರೆವಿನ್ಯೂ ಡಿವಿಜನ್ (RD) ಸಂಖ್ಯೆ ನಮೂದಿಸಬೇಕು. ನಂತರ ತಾವು ಸಲ್ಲಿಸುವ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.**

6) ಹೊರರಾಜ್ಯದ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಮೀಸಲಾತಿ ಇರುವುದಿಲ್ಲ. ಅವರು ಸ್ನಾತಕೋತ್ತರ ಪರೀಕ್ಷೆಯಲ್ಲಿ ನಿಗದಿತ ಕನಿಷ್ಠ 55% ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ಸಾಮಾನ್ಯ ವರ್ಗದಡಿಯಲ್ಲಿ ಪ್ರವೇಶಾತಿಗೆ ನೊಂದಾಯಿಸಬಹುದು. SC/ST/OBC/Transgender/PwD ಅರ್ಹತೆಯ ನಿಯಮವು ಕೇವಲ ಕರ್ನಾಟಕ ರಾಜ್ಯದ SC/ST/OBC/Transgender/PwD ಅಭ್ಯರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.

7) ಅಭ್ಯರ್ಥಿಗಳು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಅವರ ಅಭ್ಯರ್ಥಿತನವು ತಾತ್ಕಾಲಿಕವೆಂದು ಭಾವಿಸಿಕೊಳ್ಳತಕ್ಕದ್ದು. ಪ್ರವೇಶಾತಿ ಪಡೆದ ಕಾರಣಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅವರನ್ನು ಅರ್ಹ ಅಭ್ಯರ್ಥಿಯಾಗಿ ಪರಿಗಣಿಸಿದೆ ಎಂದು ತಿಳಿಯಬಾರದು. ಅಭ್ಯರ್ಥಿಗಳ ಅರ್ಹತಾ ನಿಬಂಧನೆಗಳನ್ನು ಪರಿಶೀಲಿಸಿದ ನಂತರ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದು.

8) ಈಗಾಗಲೇ ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಮುಂಬರುವ ಕೆಸೆಟ್ ಪರೀಕ್ಷೆಗೆ ಅದೇ ವಿಷಯದಲ್ಲಿ (Same Subject) ಅರ್ಜಿ ಸಲ್ಲಿಸುವಂತಿಲ್ಲ. ಕೆಸೆಟ್ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಿದ್ದು ಕಂಡು ಬಂದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಅರ್ಹತೆಯನ್ನು ರದ್ದುಗೊಳಿಸಲಾಗುವುದು ಹಾಗೂ ಅವರು ಹಿಂದೆ ಪಡೆದಿರುವ ಕೆಸೆಟ್ ಪರೀಕ್ಷೆಯ ಅರ್ಹತೆಯನ್ನು ಕೂಡ ಡಿನೋಟಿಫಿಕೇಷನ್ ಮೂಲಕ ಹಿಂಪಡೆಯಲಾಗುವುದು.

9) ಭಾರತೀಯ ವಿಶ್ವವಿದ್ಯಾಲಯ / ಸಂಸ್ಥೆ ನೀಡುವ ಎರಡು ವರ್ಷದ ಸ್ನಾತಕೋತ್ತರ ಡಿಪ್ಲೊಮಾ / ಪ್ರಮಾಣಪತ್ರ ಅಥವಾ ವಿದೇಶಿ ವಿಶ್ವವಿದ್ಯಾಲಯ / ಸಂಸ್ಥೆ ನೀಡುವ ವಿದೇಶಿ ಪದವಿ / ಡಿಪ್ಲೊಮಾ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ, ಮಾನ್ಯತೆ ಪಡೆದ ಭಾರತೀಯ ಸ್ನಾತಕೋತ್ತರ ಪದವಿಯೊಂದಿಗೆ ತಮ್ಮ ಡಿಪ್ಲೊಮಾ/ ಪದವಿ/ ಪ್ರಮಾಣಪತ್ರದ ಸಮಾನತೆಯನ್ನು (ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ್ (ಎಐಯು) ನವದೆಹಲಿ (www.aiu.ac.in) ಯಿಂದ ಖಚಿತಪಡಿಸಿಕೊಳ್ಳಬೇಕು.

II) **ವಯೋಮಿತಿ :**

ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ-2025 ತೆಗೆದುಕೊಳ್ಳಲು ಗರಿಷ್ಠ ವಯೋಮಿತಿ ಇರುವುದಿಲ್ಲ.

III) **ವಿನಾಯಿತಿ :**

ಕರ್ನಾಟಕ ರಾಜ್ಯದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ, ವಿಶ್ವವಿದ್ಯಾನಿಲಯ / ಪ್ರಥಮ ದರ್ಜೆ ಕಾಲೇಜುಗಳು / ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಸರ್ಕಾರಿ / ಅನುದಾನಿತ / ಖಾಸಗಿ) ನೇಮಕವಾಗಬೇಕಾದರೆ, ಅಭ್ಯರ್ಥಿಗಳು ಕಡ್ಡಾಯವಾಗಿ ಕೆಸೆಟ್ ಅಥವಾ ಎನ್.ಇ.ಟಿ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರಬೇಕೆಂಬ ನಿಯಮವಿದೆ.

a) ಯು.ಜಿ.ಸಿ ಕಾಲಕಾಲಕ್ಕೆ ಹೊರಡಿಸುವ ನಿಬಂಧನೆಗಳು, ಯು.ಜಿ.ಸಿ ಮಾರ್ಗಸೂಚಿಗಳು ಮತ್ತು ಅಧಿನಿಯಮಗಳ ಅನ್ವಯ ಕೆಸೆಟ್ ಅರ್ಹತೆ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು.

b) ಅಭ್ಯರ್ಥಿಯು 1989 ಕ್ಕಿಂತ ಮುಂಚಿತವಾಗಿ ಯು.ಜಿ.ಸಿ-ನೆಟ್/ಸಿ.ಎಸ್.ಐ.ಆರ್-ನೆಟ್, ಜೆ.ಆರ್.ಎಫ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ಕೆಸೆಟ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

c) ಕೆಸೆಟ್ ಅಭ್ಯರ್ಥಿಗಳಿಗೆ 1ನೇ ಜೂನ್ 2002 ಕ್ಕಿಂತ ಮೊದಲೇ ನಡೆಸಲಾದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಅಭ್ಯರ್ಥಿಗಳಿಗೂ ಕೆಸೆಟ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ಅಂತಹ ಅಭ್ಯರ್ಥಿಗಳು ಭಾರತದಲ್ಲಿ ಎಲ್ಲಿಯಾದರೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹರಾಗುತ್ತಾರೆ. ಆದರೆ 01 ಜೂನ್, 2002 ರ ನಂತರ ಕೆಸೆಟ್‌ನಲ್ಲಿ ಅರ್ಹರಾದ ಅಭ್ಯರ್ಥಿಗಳು ಆಯಾ ರಾಜ್ಯಗಳ ವಿಶ್ವವಿದ್ಯಾನಿಲಯಗಳು / ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಾತ್ರ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಹರಾಗಿರುತ್ತಾರೆ.

WWW.SHIKARAT.COM

## IV) ಪರೀಕ್ಷಾ ಶುಲ್ಕ ಮತ್ತು ಪಾವತಿಸುವ ವಿಧಾನ :

**1) ಪರೀಕ್ಷಾ ಶುಲ್ಕ :**

| ವರ್ಗ | ಶುಲ್ಕ (ರೂ.ಗಳಲ್ಲಿ) |
|---|---|
| ಸಾಮಾನ್ಯ ವರ್ಗ, ಪ್ರವರ್ಗ II-A, II-B, III-A, III-B ಹಾಗೂ ಇತರೆ ರಾಜ್ಯದ ಅಭ್ಯರ್ಥಿಗಳಿಗೆ | 1,000/- |
| ಪ್ರವರ್ಗ–I, SC, ST, PwD ಮತ್ತು ತೃತೀಯ ಲಿಂಗ ಅಭ್ಯರ್ಥಿಗಳಿಗೆ | 700/- |

**2) ಶುಲ್ಕ ಪಾವತಿಸುವ ವಿಧಾನ :**

ಮೇಲ್ಕಂಡ ಶುಲ್ಕವನ್ನು ಆನ್‌ಲೈನ್ ಮೂಲಕ ಮಾತ್ರವೇ ಪಾವತಿಸಬೇಕು.

**ಸೂಚನೆ :**

1. **ಬೇರೆ ಯಾವುದೇ ವಿಧಾನದ ಮೂಲಕ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ (ಉದಾ: Money Order / Demand Draft / IPO Office Challan ಇತ್ಯಾದಿಗಳನ್ನು ಒಪ್ಪಲಾಗುವುದಿಲ್ಲ.**
2. **ಒಮ್ಮೆ ಶುಲ್ಕ ಪಾವತಿಸಿದ ನಂತರ ಅದನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**

## V) ಪರೀಕ್ಷಾ ವಿಧಾನ ಮತ್ತು ಪರಿಕ್ಷಾ ದಿನಾಂಕ :

ಕೆಸೆಟ್ (KSET) ಪರೀಕ್ಷೆಯಲ್ಲಿ ಎರಡು ಪ್ರಶ್ನೆಪತ್ರಿಕೆಗಳಿರುತ್ತವೆ. ಎರಡು ಪತ್ರಿಕೆಗಳು ಸಹ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಪರೀಕ್ಷೆಯು ದಿನಾಂಕ: **02.11.2025** ರಂದು ಒಂದು ಅವಧಿಯಲ್ಲಿ ಈ ಕೆಳಕಂಡಂತೆ ನಡೆಯುವುದು.

| ದಿನಾಂಕ | ಪತ್ರಿಕೆ | ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅವಧಿ |
|---|---|---|---|---|
| 02.11.2025 | I | 100 | 50 ಪ್ರಶ್ನೆಗಳು ಕಡ್ಡಾಯವಾಗಿರುತ್ತವೆ. | 3 ಗಂಟೆಗಳು (ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ) |
| | II | 200 | 100 ಪ್ರಶ್ನೆಗಳು ಕಡ್ಡಾಯವಾಗಿರುತ್ತವೆ | |

**ಸೂಚನೆ :** ಅಭ್ಯರ್ಥಿಗಳು ಮಧ್ಯಾಹ್ನ 1.00 ಗಂಟೆಯ ಮೊದಲು ಪರೀಕ್ಷಾ ಕೇಂದ್ರದಿಂದ ಹೊರಬರಲು ಅನುಮತಿಸಲಾಗುವುದಿಲ್ಲ.

**ಪತ್ರಿಕೆ – I : ಸಾಮಾನ್ಯ ಪತ್ರಿಕೆಯು ಅಭ್ಯರ್ಥಿಗಳ ಬೋಧನೆ, ಸಂಶೋಧನೆ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಪರೀಕ್ಷಿಸುವುದಾಗಿರುತ್ತದೆ.**

ಈ ಪತ್ರಿಕೆಯು ಅಭ್ಯರ್ಥಿಗಳ ಸಾಮಾನ್ಯ ಪತ್ರಿಕೆಯಾಗಿದ್ದು, ಸಾಮಾನ್ಯ ಜ್ಞಾನ, ಬೋಧನೆ ಹಾಗೂ ಸಂಶೋಧನೆಯ ಅಭಿರುಚಿಗೆ ಸಂಬಂಧಿಸಿರುತ್ತದೆ. ಅಭ್ಯರ್ಥಿಗಳ ಸಾಮಾನ್ಯ ತಿಳುವಳಿಕೆಗಳನ್ನು ಗ್ರಹಿಸುವ ಹಾಗೂ ಯೋಚನಾ ಸಾಮರ್ಥ್ಯವನ್ನು ಅಳೆಯುವಂತಹದ್ದಾಗಿರುತ್ತದೆ. ಈ ಪತ್ರಿಕೆಯು 50 ಬಹು ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೆ 02 ಅಂಕಗಳಿರುತ್ತದೆ.

**ಪತ್ರಿಕೆ – II : ವಿಷಯ ಪತ್ರಿಕೆ**

ಈ ಪತ್ರಿಕೆಯು ಅಭ್ಯರ್ಥಿಯ ಆಯ್ಕೆ ಮಾಡಿದ ವಿಷಯದ್ದಾಗಿರುತ್ತದೆ. ಈ ಪತ್ರಿಕೆಯು ಆಯ್ಕೆ ಮಾಡಿದ ವಿಷಯಗಳಲ್ಲಿ 100 ಕಡ್ಡಾಯ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೂ 02 ಅಂಕಗಳಿರುತ್ತದೆ. ಗರಿಷ್ಠ 200 ಅಂಕಗಳಿರುತ್ತವೆ.

ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಜೊತೆಗೆ ನೀಡುವ ಪೇಪರ್–I ಮತ್ತು ಪೇಪರ್–II ರ ಒ.ಎಂ.ಆರ್. ಹಾಳೆಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿಯೇ ಉತ್ತರಗಳನ್ನು ಗುರುತಿಸಬೇಕು.

## VI) ಕೆಸೆಟ್ (KSET) ಪರೀಕ್ಷೆಯ ಫಲಿತಾಂಶ ಪ್ರಕಟಣೆಯ ವಿಧಾನ :

**UGC ಮಾರ್ಗಸೂಚಿಗಳ ಪ್ರಕಾರ KSETನ ಮಾನದಂಡವು UGC-NETನ ಮಾನದಂಡದ ಪ್ರಕಾರವಾಗಿರುತ್ತದೆ. ಇದು ಅಂತಿಮ ಮತ್ತು ಅಭ್ಯರ್ಥಿಗಳು ಇದಕ್ಕೆ ಬಾಧ್ಯರಾಗಿರಬೇಕಾಗುತ್ತದೆ.**

ಕೆಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಅಭ್ಯರ್ಥಿಗಳನ್ನು ಈ ಕೆಳಗಿನ UGC ಮಾರ್ಗಸೂಚಿಗಳಂತೆ ಪರಿಗಣಿಸಲಾಗುತ್ತದೆ. ಸಹಾಯಕ ಪ್ರಾಧ್ಯಾಪಕರ ಅರ್ಹತೆಗಾಗಿ ಅಭ್ಯರ್ಥಿಗಳು ಪೇಪರ್–I ಮತ್ತು ಪೇಪರ್–II ರ ಪತ್ರಿಕೆಗಳ ಒಟ್ಟು ಅಂಕಗಳಲ್ಲಿ ಕೆಳಗೆ ನಿರ್ದಿಷ್ಟಪಡಿಸಿದ ಕನಿಷ್ಠ ಅಂಕಗಳನ್ನು ಪಡೆಯಬೇಕು.

SHIKARAT.COM



WWW.SHIKARAT.COM

| CATEGORY | ಪಡೆಯಬೇಕಾದ ಕನಿಷ್ಠ (%) ಅಂಕಗಳು | |
|---|---|---|
| | PAPER-I | PAPER-II |
| GENERAL (GM) | ಎರಡು ಪತ್ರಿಕೆಗಳಲ್ಲೂ ಸೇರಿ ಒಟ್ಟು 40% ಅಂಕಗಳು | |
| SC/ST/CAT-I/II-A/II-B/III-A/ III-B/PwD/TRANSGENDER | ಎರಡು ಪತ್ರಿಕೆಗಳಲ್ಲೂ ಸೇರಿ ಒಟ್ಟು 35% ಅಂಕಗಳು | |

**ಹಂತ– 1 :** ಸಹಾಯಕ ಪ್ರಾಧ್ಯಾಪಕರ ಅರ್ಹತೆಯ ಒಟ್ಟು ಸಂಖ್ಯೆ (Total Slots), ಒಟ್ಟು ಎರಡು ಪತ್ರಿಕೆಗಳಿಗೂ (ಪತ್ರಿಕೆ I ಮತ್ತು ಪತ್ರಿಕೆ II) ಹಾಜರಾದ ಅಭ್ಯರ್ಥಿಗಳ 6% ಸಂಖ್ಯೆಗೆ ಸಮಾನವಾಗಿರುತ್ತದೆ.

**ಹಂತ– 2 :** ಈ ಒಟ್ಟು ಸ್ಲಾಟ್‌ಗಳನ್ನು ಎರಡೂ ಪತ್ರಿಕೆಗಳಿಗೂ ಹಾಜರಾಗಿ ಹಂತ–I ನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಒಟ್ಟು ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ವಿಷಯವಾರು ಮತ್ತು ಪ್ರವರ್ಗವಾರು ಸಿದ್ಧಪಡಿಸಲಾಗುತ್ತದೆ.

ಸಹಾಯಕ ಪ್ರಾಧ್ಯಾಪಕರ ಅರ್ಹತೆಗೆ ಪರಿಗಣಿಸಬೇಕಾದರೆ, ಪತ್ರಿಕೆ – I ಮತ್ತು ಪತ್ರಿಕೆ – II ರಲ್ಲೂ ಹಾಜರಾಗಿ, GM ಅಭ್ಯರ್ಥಿಗಳು ಎರಡೂ ಪತ್ರಿಕೆಗಳೂ ಸೇರಿ ಒಟ್ಟು ಶೇ.40 ಅಂಕಗಳು ಮತ್ತು ಮೀಸಲಾತಿ ವ್ಯಾಪ್ತಿಗೆ ಬರುವ ಪ.ಜಾ/ಪ.ಪಂ, ಇತರೆ ಹಿಂದುಳಿದ ವರ್ಗ, ತೃತೀಯ ಲಿಂಗದ ಮತ್ತು ವಿಶೇಷಚೇತನ ಅಭ್ಯರ್ಥಿಗಳು ಎರಡೂ ಪತ್ರಿಕೆಗಳಲ್ಲೂ ಸೇರಿ ಶೇ.35 ಅಂಕಗಳನ್ನು ಗಳಿಸಿರಬೇಕು. ಅಂತಹ ಅಭ್ಯರ್ಥಿಗಳನ್ನು ಮಾತ್ರ ಅರ್ಹತಾ ಪಟ್ಟಿಗೆ ಪರಿಗಣಿಸಲಾಗುವುದು. ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ ವರ್ಗವಾರು, ವಿಷಯವಾರು ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು.

ಯುಜಿಸಿಯ ಫಲಿತಾಂಶದ ಸೂತ್ರದ ಪ್ರಕಾರ ಒಟ್ಟು ಸ್ಲಾಟ್‌ಗಳನ್ನು ಲೆಕ್ಕಾಚಾರಮಾಡಿ ರಾಜ್ಯ ಸರ್ಕಾರದ ಮೀಸಲಾತಿ ನೀತಿಯ ಅನುಸಾರವಾಗಿ ಅರ್ಹತಾ ಪಟ್ಟಿಯನ್ನು ವರ್ಗವಾರು, ವಿಷಯವಾರು ಸಿದ್ಧಪಡಿಸಿ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಫಲಿತಾಂಶವನ್ನು ಪ್ರಕಟಿಸಲಾಗುವುದು.

**ಈ ಮೇಲೆ ತಿಳಿಸಿದ ಫಲಿತಾಂಶದ ಪ್ರಕಟಣೆಯ ವಿಧಾನವು ಕೆಸೆಟ್ ನಿಬಂಧನೆಗಳಿಗೆ ಬದ್ಧವಾಗಿರುತ್ತದೆ. ಈ ಸಂಬಂಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.**

**ಹಂತ–3 :** ಯುಜಿಸಿಯ ಸೆಟ್ ಮಾರ್ಗಸೂಚಿಗಳ ಪ್ರಕಾರ, ಎರಡು ಪತ್ರಿಕೆಗಳಿಗೂ ಹಾಜರಾಗುವ ಅಭ್ಯರ್ಥಿಗಳಲ್ಲಿ ಶೇಕಡ 6% ರಷ್ಟು ಅಭ್ಯರ್ಥಿಗಳು ಮಾತ್ರ ಸಹಾಯಕ ಪ್ರಾಧ್ಯಾಪಕರಿಗೆ ಅರ್ಹರು ಎಂದು ಪರಿಗಣಿಸಲಾಗುವುದು. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನೀತಿಯನ್ನು ಅನುಸರಿಸಿ ಪ್ರವರ್ಗವಾರು ಹಾಗೂ ವಿಷಯವಾರು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ.

**ಈ ಕೆಳಕಂಡ ಸೂತ್ರದ ಪ್ರಕಾರ ಪ್ರತಿ ವರ್ಗದಲ್ಲೂ ವಿಷಯವಾರು ಹಂಚಿಕೆ ಮಾಡಲಾಗುವುದು.**

1) <u>ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ</u>

ಒಂದು ವಿಷಯದಲ್ಲಿ ಸಾಮಾನ್ಯ ವರ್ಗದಲ್ಲಿ ಅರ್ಹತೆ ಪಡೆಯಬೇಕಾದ ಅಭ್ಯರ್ಥಿಗಳ ಸಂಖ್ಯೆ = (ಆ ವಿಷಯದಲ್ಲಿ ಒಟ್ಟು 40% ಅಥವಾ ಹೆಚ್ಚು ಅಂಕಗಳನ್ನು ಗಳಿಸಿರುವ ಸಾಮಾನ್ಯ ಅಭ್ಯರ್ಥಿಗಳ ಸಂಖ್ಯೆ / ಎಲ್ಲಾ ವಿಷಯಗಳಲ್ಲೂ ಸೇರಿ ಒಟ್ಟು 40% ಅಥವಾ ಹೆಚ್ಚು ಅಂಕಗಳನ್ನು ಗಳಿಸಿರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳ ಒಟ್ಟು ಸಂಖ್ಯೆ) X ಸಾಮಾನ್ಯ ವರ್ಗದಲ್ಲಿ ಎಲ್ಲಾ ವಿಷಯಗಳಲ್ಲೂ ಸೇರಿ ಅರ್ಹತೆ ಪಡೆಯಬೇಕಾಗಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ

2) <u>ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ</u>

ಒಂದು ವಿಷಯದಲ್ಲಿ ಮೀಸಲಾತಿ ವರ್ಗದಲ್ಲಿ ಅರ್ಹತೆ ಪಡೆಯಬೇಕಾದ ಅಭ್ಯರ್ಥಿಗಳ ಸಂಖ್ಯೆ = (ಆ ವಿಷಯದಲ್ಲಿ ಒಟ್ಟು 35% ಅಥವಾ ಹೆಚ್ಚು ಅಂಕಗಳನ್ನು ಗಳಿಸಿರುವ ಮೀಸಲಾತಿ ವರ್ಗದ ಅಭ್ಯರ್ಥಿಗಳ ಸಂಖ್ಯೆ / ಎಲ್ಲಾ ವಿಷಯಗಳಲ್ಲೂ ಸೇರಿ ಒಟ್ಟು 35% ಅಥವಾ ಹೆಚ್ಚು ಅಂಕಗಳನ್ನು ಗಳಿಸಿರುವ ಮೀಸಲಾತಿ ವರ್ಗದ ಅಭ್ಯರ್ಥಿಗಳ ಒಟ್ಟು ಸಂಖ್ಯೆ) X ಮೀಸಲಾತಿ ವರ್ಗದಲ್ಲಿ ಎಲ್ಲಾ ವಿಷಯಗಳಲ್ಲೂ ಸೇರಿ ಅರ್ಹತೆ ಪಡೆಯಬೇಕಾಗಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆ

**ಆದ್ದರಿಂದ, ಆನ್‌ಲೈನ್ ಅರ್ಜಿ ನಮೂನೆಯಲ್ಲಿ ವರ್ಗವನ್ನು ಸರಿಯಾಗಿ ನಮೂದಿಸಬೇಕು (ಆನ್‌ಲೈನ್ ಅರ್ಜಿಯಲ್ಲಿ ಪ್ರವರ್ಗ, ವಿಷಯ, ಲಿಂಗ, ಪರೀಕ್ಷಾ ಕೇಂದ್ರ, ಇತ್ಯಾದಿಗಳ ಬದಲಾವಣೆಯ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ).**

ಮೇಲಿನ ಅರ್ಹತಾ ಮಾನದಂಡಗಳು ಅಂತಿಮವಾಗಿರುತ್ತದೆ ಮತ್ತು ಯುಜಿಸಿಯು ನಿಗದಿಪಡಿಸಿದ ನಿಬಂಧನೆಗಳಿಗೆ ಬದ್ಧವಾಗಿರುತ್ತವೆ.

WWW.SHIKARAT.COM

VII) **ಕೆಸೆಟ್ ಪಠ್ಯಕ್ರಮ ಮತ್ತು ಪ್ರಶ್ನೆ ಪತ್ರಿಕೆ :**

ಕೆಸೆಟ್ ಪಠ್ಯಕ್ರಮ: ಕೆಸೆಟ್ (KSET) ಪರೀಕ್ಷಾ ಪಠ್ಯಕ್ರಮವು, ಯು.ಜಿ.ಸಿ / ಸಿ.ಎಸ್.ಐ.ಆರ್ ನೆಟ್ ನಿಗದಿಪಡಿಸಿರುವ ಪಠ್ಯಕ್ರಮದ ಮಾದರಿಯಲ್ಲೇ ಇರುತ್ತದೆ. ಎಲ್ಲಾ ವಿಷಯಗಳ ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಿಂದ (https://cetonline.karnataka.gov.in/kea/) ಡೌನ್ಲೋಡ್ ಮಾಡಿಕೊಳ್ಳಬಹುದು. ಕೆಇಎಯಿಂದ ವಿಷಯಗಳ ಪಠ್ಯಕ್ರಮವನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದಿಲ್ಲ.

VIII) **ವಿಷಯಗಳು :**

ಕೆಸೆಟ್ ಪರೀಕ್ಷೆಯು 33 ವಿಷಯಗಳಿಗೆ ನಡೆಯಲಿದ್ದು, ಆ 33 ವಿಷಯಗಳ ಹೆಸರು, ವಿಷಯಗಳ ಕೋಡ್ ಮತ್ತು ಪ್ರಶ್ನೆ ಪತ್ರಿಕೆಯ ಅವೃತ್ತಿಯ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂಖ್ಯೆ | ವಿಷಯ | ವಿಷಯದ ಕೋಡ್ | ಪ್ರಶ್ನೆ ಪತ್ರಿಕೆಯ ಅವೃತ್ತಿ |
|---|---|---|---|
| 1 | ವಾಣಿಜ್ಯ ಶಾಸ್ತ್ರ | 1 | ಆಂಗ್ಲಭಾಷೆ |
| 2 | ಕನ್ನಡ | 2 | ಕನ್ನಡಭಾಷೆ |
| 3 | ಅರ್ಥಶಾಸ್ತ್ರ (I) | 3 | ಕನ್ನಡ ಮತ್ತು ಆಂಗ್ಲಭಾಷೆ |
| 4 | ಇಂಗ್ಲೀಷ್ | 4 | ಆಂಗ್ಲಭಾಷೆ |
| 5 | ರಾಜ್ಯಶಾಸ್ತ್ರ | 5 | ಕನ್ನಡ ಮತ್ತು ಆಂಗ್ಲಭಾಷೆ |
| 6 | ಇತಿಹಾಸ | 6 | ಕನ್ನಡ ಮತ್ತು ಆಂಗ್ಲಭಾಷೆ |
| 7 | ಸಮಾಜ ಶಾಸ್ತ್ರ | 7 | ಕನ್ನಡ ಮತ್ತು ಆಂಗ್ಲಭಾಷೆ |
| 8 | ಭೂಗೋಳ ಶಾಸ್ತ್ರ | 8 | ಕನ್ನಡ ಮತ್ತು ಆಂಗ್ಲಭಾಷೆ |
| 9 | ಹಿಂದಿ | 9 | ಹಿಂದಿಭಾಷೆ |
| 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) (II) | 10 | ಆಂಗ್ಲಭಾಷೆ |
| 11 | ಶಿಕ್ಷಣ | 12 | ಕನ್ನಡ ಮತ್ತು ಆಂಗ್ಲಭಾಷೆ |
| 12 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ | 13 | ಆಂಗ್ಲಭಾಷೆ |
| 13 | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | 14 | ಕನ್ನಡ ಮತ್ತು ಆಂಗ್ಲಭಾಷೆ |
| 14 | ಮನೋವಿಜ್ಞಾನ | 15 | ಕನ್ನಡ ಮತ್ತು ಆಂಗ್ಲಭಾಷೆ |
| 15 | ಸಮಾಜ ಕಾರ್ಯ | 16 | ಕನ್ನಡ ಮತ್ತು ಆಂಗ್ಲಭಾಷೆ |
| 16 | ಕಾನೂನು | 18 | ಆಂಗ್ಲಭಾಷೆ |
| 17 | ಸಂಸ್ಕೃತ | 19 | ಸಂಸ್ಕೃತಭಾಷೆ |
| 18 | ದೈಹಿಕ ಶಿಕ್ಷಣ | 20 | ಕನ್ನಡ ಮತ್ತು ಆಂಗ್ಲಭಾಷೆ |
| 19 | ಉರ್ದು | 22 | ಉರ್ದು ಭಾಷೆ |
| 20 | ಸಾರ್ವಜನಿಕ ಆಡಳಿತ | 23 | ಕನ್ನಡ ಮತ್ತು ಆಂಗ್ಲಭಾಷೆ |
| 21 | ಗಣಕ ವಿಜ್ಞಾನ ಮತ್ತು ಅನ್ವಯಿಕಗಳು | 24 | ಆಂಗ್ಲಭಾಷೆ |
| 22 | ಭೌತಿಕ ವಿಜ್ಞಾನಗಳು (III) | 25 | ಆಂಗ್ಲಭಾಷೆ |
| 23 | ಗಣಿತ ವಿಜ್ಞಾನಗಳು (IV) | 26 | ಆಂಗ್ಲಭಾಷೆ |
| 24 | ರಾಸಾಯನಿಕ ವಿಜ್ಞಾನಗಳು (V) | 27 | ಆಂಗ್ಲಭಾಷೆ |
| 25 | ಜೀವ ವಿಜ್ಞಾನಗಳು (VI) | 28 | ಆಂಗ್ಲಭಾಷೆ |
| 26 | ಪರಿಸರ ವಿಜ್ಞಾನಗಳು | 29 | ಆಂಗ್ಲಭಾಷೆ |
| 27 | ಗೃಹ ವಿಜ್ಞಾನ | 30 | ಆಂಗ್ಲಭಾಷೆ |
| 28 | ವಿದ್ಯುನ್ಮಾನ ವಿಜ್ಞಾನ | 31 | ಆಂಗ್ಲಭಾಷೆ |
| 29 | ಭೂ ವಿಜ್ಞಾನಗಳು (VII) | 32 | ಆಂಗ್ಲಭಾಷೆ |
| 30 | ಮಹಿಳಾ ಅಧ್ಯಯನಗಳು (VIII) | 37 | ಕನ್ನಡ ಮತ್ತು ಆಂಗ್ಲಭಾಷೆ |
| 31 | ಪ್ರದರ್ಶಕ ಕಲೆಗಳು | 39 | ಕನ್ನಡ ಮತ್ತು ಆಂಗ್ಲಭಾಷೆ |
| 32 | ಸಂಗೀತ | 40 | ಕನ್ನಡ ಮತ್ತು ಆಂಗ್ಲಭಾಷೆ |
| 33 | ದೃಶ್ಯ ಕಲೆಗಳು | 41 | ಕನ್ನಡ ಮತ್ತು ಆಂಗ್ಲಭಾಷೆ |

ಸೂಚನೆ : ಮೇಲ್ಕಂಡ ಪಟ್ಟಿಯಲ್ಲಿರುವ (I), (II), (III), (IV), (V), (VI), (VII), (VIII) ರೋಮನ್ ಸಂಖ್ಯೆಗಳ ವಿವರ ಈ ಕೆಳಗಿನಂತಿವೆ.

WWW.SHIKARAT.COM

I) ಅರ್ಥಶಾಸ್ತ್ರ / ಕೋ–ಆಪರೇಷನ್ ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು **'ಅರ್ಥಶಾಸ್ತ್ರ'**ದಲ್ಲಿ ಕೆಸೆಟ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

II) ನಿರ್ವಹಣೆ (ಮ್ಯಾನೇಜ್‌ಮೆಂಟ್) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಅಥವಾ ಎರಡು ವರ್ಷದ ಪಿ.ಜಿ. ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು **'ನಿರ್ವಹಣೆ' (ಮ್ಯಾನೇಜ್‌ಮೆಂಟ್)** ವಿಷಯದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

III) ಭೌತಶಾಸ್ತ್ರ /ಎಲೆಕ್ಟ್ರಾನಿಕ್ಸ್ /ಪರಮಾಣು ಮತ್ತು ಅಣು ಭೌತವಿಜ್ಞಾನ /ಕ್ಲಾಸಿಕಲ್ ಡೈನಾಮಿಕ್ಸ್ /ಕಂಡೆನ್ಸ್‌ಡ್ ಮ್ಯಾಟರ್ ಫಿಜಿಕ್ಸ್/ ಎಲೆಕ್ಟ್ರೋಮ್ಯಾಗ್ನೆಟಿಕ್/ ಎಕ್ಸ್‌ಪೆರಿಮೆಂಟಲ್ ಡಿಸೈನ್/ ನ್ಯೂಕ್ಲಿಯರ್, ಸ್ಪೇಸ್ ಮತ್ತು ಪಾರ್ಟಿಕಲ್ ಫಿಜಿಕ್ಸ್/ ಕ್ವಾಂಟಮ್ ಫಿಜಿಕ್ಸ್/ ಥರ್ಮೋಡೈನಾಮಿಕ್ಸ್, ಅಸ್ಟ್ರೋನಾಮಿ, ಅಸ್ಟ್ರೋಫಿಜಿಕ್ಸ್ / ಮೆಟೀರಿಯಲ್ ಸೈನ್ಸ್ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಭೌತಿಕ ವಿಜ್ಞಾನ'** ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

IV) ಶುದ್ಧ ಗಣಿತ ವಿಜ್ಞಾನ / ಸಂಖ್ಯಾಶಾಸ್ತ್ರ/ ಅನ್ವಯಿಕ ಗಣಿತ ವಿಜ್ಞಾನ /ಗಣಿತ ಮತ್ತು ಗಣಕ ವಿಜ್ಞಾನ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಗಣಿತ ವಿಜ್ಞಾನ'** ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

V) ರಾಸಾಯನಿಕ ವಿಜ್ಞಾನಗಳು / ವಿಶ್ಲೇಷಣಾತ್ಮಕ ರಾಸಾಯನ ವಿಜ್ಞಾನ/ ಇನಾರ್ಗ್ಯಾನಿಕ್ (ನಿರವಯವ) / ರಾಸಾಯನಿಕ ವಿಜ್ಞಾನ / ಆರ್ಗ್ಯಾನಿಕ್ (ಸಾವಯವ) ರಾಸಾಯನ ವಿಜ್ಞಾನ/ ಭೌತ ರಸಾಯನ ವಿಜ್ಞಾನ/ ಮೆಡಿಸಿನಲ್ ರಾಸಾಯನ ಶಾಸ್ತ್ರ / ಅನ್ವಯಿಕ ರಾಸಾಯನ ಶಾಸ್ತ್ರ / ಪರಮಾಣು ರಸಾಯನ ಶಾಸ್ತ್ರ / ಪರಿಸರ ರಸಾಯನ ಶಾಸ್ತ್ರ / ಸಾಗರ ರಾಸಾಯನ ಶಾಸ್ತ್ರ / ಔಷಧೀಯ ರಸಾಯನ ಶಾಸ್ತ್ರ / ಜೈವಿಕ ಸಾವಯವ ರಸಾಯನ ಶಾಸ್ತ್ರ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ರಾಸಾಯನಿಕ ವಿಜ್ಞಾನ'** ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VI) ಜೀವ ರಾಸಾಯನ ವಿಜ್ಞಾನ / ಜೀವ ವಿಜ್ಞಾನ/ ಜೈವಿಕ ತಂತ್ರಜ್ಞಾನ/ಜೀವ ವೈವಿಧ್ಯತೆ ಮತ್ತು Taxonoy/ ಸಸ್ಯವಿಜ್ಞಾನ/ ಅನುವಂಶಿಕ/ ಸೂಕ್ಷ್ಮ ಜೀವವಿಜ್ಞಾನ/ ಶರೀರಶಾಸ್ತ್ರ / ಪ್ರಾಣಿ ವಿಜ್ಞಾನ/ ಮೀನುಗಾರಿಕೆ ವಿಜ್ಞಾನ/ ಅನಿಮಲ್ ಬಯೋಲಾಜಿ/ ಸಾಗರ ಜೀವಶಾಸ್ತ್ರ/ ಅಪ್ಲೈಡ್ ಜೆನೆಟಿಕ್ಸ್ / ರೇಷ್ಮೆಕೃಷಿ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಜೈವಿಕ ವಿಜ್ಞಾನ'** ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VII) ಭೂ ವಿಜ್ಞಾನ/ ಅನ್ವಯಿಕ ಭೂ ವಿಜ್ಞಾನ/ ಭೂ ಭೌತವಿಜ್ಞಾನ (ಜಿಯೋ ಫಿಸಿಕ್ಸ್) / ಹವಾಮಾನ ವಿಜ್ಞಾನ / ಸಾಗರ ವಿಜ್ಞಾನ / ಭೌತಿಕ ಭೂಗೋಳಶಾಸ್ತ್ರ / ಎಂ.ಎಸ್. ಭೂವಿಜ್ಞಾನ / ಭೂ ವಿಜ್ಞಾನ ಸಂಪನ್ಮೂಲ ಮತ್ತು ಸಾಗರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ / ಪೆಟ್ರೋಲಿಯಂ ಭೂವಿಜ್ಞಾನ/ ಜಿಯೋ ಇನ್‌ಫಾರ್‌ಮ್ಯಾಟಿಕ್ಸ್/ ಅನ್ವಯಿಕ ಭೂ ರಸಾಯನಶಾಸ್ತ್ರ/ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆಯನ್ನು **'ಭೂ ವಿಜ್ಞಾನ'** ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

VIII) ಮಹಿಳಾ ಅಧ್ಯಯನ / ಗ್ರಾಮೀಣ ಅಭಿವೃದ್ಧಿ, ಮಾನವಿಕ / ಸಮಾಜ ವಿಜ್ಞಾನ ಹಾಗೂ ಭಾಷಾ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಹೊಂದಿರುವ / ಪೂರೈಸಲಿರುವ ಅಭ್ಯರ್ಥಿಗಳು **'ಮಹಿಳಾ ಅಧ್ಯಯನ'** ವಿಷಯದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

**ಸೂಚನೆ:**

1) **ಅಭ್ಯರ್ಥಿಗಳು ಕೆಸೆಟ್ ಪರೀಕ್ಷೆ ಬರೆಯುವ ವಿಷಯದಲ್ಲಿ ಯುಜಿಸಿ ನವದೆಹಲಿಯಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಸ್ನಾತಕೋತ್ತರ ಅಥವಾ ಯಾವುದೇ ತತ್ಸಮಾನ ಪದವಿಯನ್ನು ಹೊಂದಿರಬೇಕು.**

2) **ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳು, ಯಾವುದಾದರೂ ಒಂದು ವಿಷಯದಲ್ಲಿ ಮಾತ್ರ ಕೆಸೆಟ್ (KSET-2025)** ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ಪರೀಕ್ಷಾ ವಿಷಯವನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸಿದ ನಂತರ ಯಾವುದೇ **ಕಾರಣಕ್ಕೂ ವಿಷಯಗಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.**

WWW.SHIKARAT.COM

IX) <u>ಪರೀಕ್ಷಾ ಕೇಂದ್ರಗಳು :</u>

| ಕ್ರಮ ಸಂಖ್ಯೆ | ಕೇಂದ್ರದ ಹೆಸರು |
|---|---|
| 1 | ಬೆಂಗಳೂರು |
| 2 | ಬೆಳಗಾವಿ |
| 3 | ಬಳ್ಳಾರಿ |
| 4 | ವಿಜಯಪುರ |
| 5 | ದಾವಣಗೆರೆ |
| 6 | ಧಾರವಾಡ |
| 7 | ಕಲಬುರಗಿ |
| 8 | ಮೈಸೂರು |
| 9 | ಶಿವಮೊಗ್ಗ |
| 10 | ತುಮಕೂರು |
| 11 | ಮಂಗಳೂರು |

i) ಭಾಗ-ಎ ಯಲ್ಲಿ ನೀಡಲಾದ ಆಯ್ದ 18 ವಿಷಯಗಳಿಗೆ ಕೆಸೆಟ್ (KSET) ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ಮೇಲ್ಕಂಡ 11 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

**'ಭಾಗ ಎ'**

| ಕ್ರಮ ಸಂಖ್ಯೆ | ವಿಷಯ ಕೋಡ್ | ವಿಷಯ |
|---|---|---|
| 1 | 01 | ವಾಣಿಜ್ಯ ಶಾಸ್ತ್ರ |
| 2 | 02 | ಕನ್ನಡ |
| 3 | 03 | ಅರ್ಥಶಾಸ್ತ್ರ |
| 4 | 04 | ಇಂಗ್ಲೀಷ್ |
| 5 | 05 | ರಾಜ್ಯಶಾಸ್ತ್ರ |
| 6 | 06 | ಇತಿಹಾಸ |
| 7 | 07 | ಸಮಾಜ ಶಾಸ್ತ್ರ |
| 8 | 09 | ಹಿಂದಿ |
| 9 | 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) |
| 10 | 12 | ಶಿಕ್ಷಣ |
| 11 | 13 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ |
| 12 | 16 | ಸಮಾಜ ಕಾರ್ಯ |
| 13 | 20 | ದೈಹಿಕ ಶಿಕ್ಷಣ |
| 14 | 24 | ಗಣಕ ವಿಜ್ಞಾನ ಮತ್ತು ಅನ್ವಯಿಕಗಳು |
| 15 | 25 | ಭೌತಿಕ ವಿಜ್ಞಾನಗಳು |
| 16 | 26 | ಗಣಿತ ವಿಜ್ಞಾನಗಳು |
| 17 | 27 | ರಸಾಯನಿಕ ವಿಜ್ಞಾನಗಳು |
| 18 | 28 | ಜೀವ ವಿಜ್ಞಾನಗಳು |

WWW.SHIKARAT.COM

ii) ಅಭ್ಯರ್ಥಿಗಳು ಭಾಗ–ಬಿ ಯಲ್ಲಿ ನೀಡಲಾಗಿರುವ 15 ವಿಷಯಗಳಿಗೆ ಬೆಂಗಳೂರು ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು.

'ಭಾಗ ಬಿ'

| ಕ್ರಮ ಸಂಖ್ಯೆ | ವಿಷಯ ಕೋಡ್ | ವಿಷಯ | ಪರೀಕ್ಷಾ ಕೇಂದ್ರದ ವಿವರ |
|---|---|---|---|
| 1 | 08 | ಭೂಗೋಳ ಶಾಸ್ತ್ರ | ಅಭ್ಯರ್ಥಿಗಳು 15 ವಿಷಯಗಳಿಗೆ ಬೆಂಗಳೂರು ಕೇಂದ್ರವನ್ನು ಮಾತ್ರ ಪರೀಕ್ಷಾ ಕೇಂದ್ರವಾಗಿ ಆಯ್ಕೆ ಮಾಡಿಕೊಳ್ಳಬೇಕು. |
| 2 | 14 | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ | |
| 3 | 15 | ಮನೋವಿಜ್ಞಾನ | |
| 4 | 18 | ಕಾನೂನು | |
| 5 | 19 | ಸಂಸ್ಕೃತ | |
| 6 | 22 | ಉರ್ದು | |
| 7 | 23 | ಸಾರ್ವಜನಿಕ ಆಡಳಿತ | |
| 8 | 29 | ಪರಿಸರ ವಿಜ್ಞಾನಗಳು | |
| 9 | 30 | ಗೃಹ ವಿಜ್ಞಾನ | |
| 10 | 31 | ವಿದ್ಯುನ್ಮಾನ ವಿಜ್ಞಾನ | |
| 11 | 32 | ಭೂ ವಿಜ್ಞಾನ | |
| 12 | 37 | ಮಹಿಳಾ ಅಧ್ಯಯನ | |
| 13 | 39 | ಪ್ರದರ್ಶಕ ಕಲೆಗಳು | |
| 14 | 40 | ಸಂಗೀತ | |
| 15 | 41 | ದೃಶ್ಯ ಕಲೆಗಳು | |

ಸೂಚನೆ :

1. ಅಭ್ಯರ್ಥಿಯು ಒಮ್ಮೆ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿದ ನಂತರ, ಪರೀಕ್ಷಾ ಕೇಂದ್ರದ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
2. ಅಭ್ಯರ್ಥಿಗಳು ಭಾಗ ಬಿ ಯಲ್ಲಿ ನಮೂದಿಸಿರುವ 15 ವಿಷಯಗಳಿಗೆ ಬೆಂಗಳೂರು ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

X) ಅರ್ಜಿಯನ್ನು ಸಲ್ಲಿಸುವ ವಿಧಾನ :

ಕೆಸೆಟ್ 2025ಕ್ಕೆ ಪರೀಕ್ಷೆ ಬರೆಯಲು ಬಯಸುವ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ https://cetonline.karnataka.gov.in/kea/ ನಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಬೇಕು.

- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಯಾವುದೇ ರೀತಿಯ ಅನಾನುಕೂಲತೆ ಅಥವಾ ಕೊನೆಯ ನಿಮಿಷದ ತೊಂದರೆಗಳು ಅಥವಾ ಅನಿರೀಕ್ಷಿತ ತೊಂದರೆಗಳನ್ನು ತಪ್ಪಿಸಲು, ಅಭ್ಯರ್ಥಿಗಳು ಕೊನೆಯ ದಿನಾಂಕಕ್ಕಾಗಿ ಕಾಯದೆ ಮುಂಚಿತವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ಕೊನೆಯ ದಿನಾಂಕದಂದು ಉಂಟಾಗುವ ಯಾವುದೇ ರೀತಿಯ ತೊಂದರೆಗಳಿಗೆ ಕೆಇಎಯು ಜವಬ್ದಾರಿಯಾಗಿರುವುದಿಲ್ಲ.
- ಅಭ್ಯರ್ಥಿಗಳು ನಿಗದಿತ ವಿವರಗಳೊಂದಿಗೆ ಈ ಕೆಳಗಿನಂತೆ ನೋಂದಾಯಿಸತಕ್ಕದ್ದು (ಅಭ್ಯರ್ಥಿಯ ವಿವರಗಳು, ವಿದ್ಯಾಭ್ಯಾಸ ಮತ್ತು ಕೆಸೆಟ್–2025 ಪರೀಕ್ಷೆಯ ವಿವರಗಳು) ಮುಂದುವರೆಸುತ್ತಾ ಅಭ್ಯರ್ಥಿಗಳು ವಿದ್ಯಾರ್ಹತೆಯ ಕುರಿತಂತೆ ತಾವು ಪಿ.ಜಿ ಕೋರ್ಸ್‌ಅನ್ನು ಉತ್ತೀರ್ಣರಾಗಿರುವ ಬಗ್ಗೆ ಅಥವಾ ಪ್ರಸ್ತುತ ವಿದ್ಯಾಭ್ಯಾಸ ಮಾಡುತ್ತಿರುವ ಬಗ್ಗೆ ಮಾಹಿತಿ ಸಲ್ಲಿಸುವುದು.

ಸೂಚನೆ:

1. **ಅಭ್ಯರ್ಥಿಗಳು ಕೆಸೆಟ್–2025 ಪರೀಕ್ಷೆಯ ಅಂತಿಮವಾಗಿ ಭರ್ತಿಮಾಡಿದ ಮುದ್ರಿತ ಪ್ರತಿಗಳನ್ನು ಸಂರಕ್ಷಿಸಿಕೊಳ್ಳುವುದು. ಸದರಿ ಮುದ್ರಿತ ಪ್ರತಿಗಳನ್ನು ಅವಶ್ಯಕತೆಗನುಗುಣವಾಗಿ ಸಲ್ಲಿಸುವುದು.**
2. **ಎಲ್ಲಾ ಸ್ಕ್ಯಾನ್ ಮಾಡಿದ ಪ್ರತಿಗಳು JPEG ಸ್ವರೂಪದಲ್ಲಿರಬೇಕು. ಆನ್‌ಲೈನ್ ಅರ್ಜಿ ವ್ಯವಸ್ಥೆಯು ನಿರ್ದಿಷ್ಟಪಡಿಸಿದ ಗಾತ್ರಗಳಿಗಿಂತ ಚಿಕ್ಕದಾದ / ದೊಡ್ಡದಾದ ಫೈಲ್‌ಗಳನ್ನು ಅಪ್‌ಲೋಡ್ ಮಾಡಲು ಅನುಮತಿಸುವುದಿಲ್ಲ.)**

ಅ) ಕೆಸೆಟ್–2025 ಪರೀಕ್ಷೆಗೆ ನಿಗದಿಪಡಿಸಲಾದ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು.

ಆ) ಪ್ರವೇಶ ಪತ್ರವನ್ನು ಕೆಇಎ ಅಂತರ್ಜಾಲದ ಮೂಲಕವೇ ಡೌನ್‌ಲೋಡ್ ಮಾಡತಕ್ಕದ್ದು. ಪ್ರವೇಶ ಪತ್ರದ ಹಾರ್ಡ್ ಕಾಪಿ (Hard Copy) ಯನ್ನು ಕೆಇಎ ಇಂದ ನೀಡಲಾಗುವುದಿಲ್ಲ. ಅಭ್ಯರ್ಥಿಗಳು ತಪ್ಪದೇ ಮಾನ್ಯವಾದ ಭಾವಚಿತ್ರವಿರುವ ಗುರುತಿನ ಪುರಾವೆ ಮತ್ತು ಪ್ರವೇಶ ಪತ್ರದೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗತಕ್ಕದ್ದು.

WWW.SHIKARAT.COM

XI) **ಸಾಮಾನ್ಯ ಸೂಚನೆಗಳು:**

1. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅದರಲ್ಲಿ ಮುದ್ರಿತವಾಗಿರುವ ಎಲ್ಲಾ ವಿವರಗಳನ್ನು ಪರಿಶೀಲಿಸಿ ಪರೀಕ್ಷಾ ಕೇಂದ್ರವನ್ನು ಖಚಿತಪಡಿಸಿಕೊಳ್ಳಬೇಕು.
2. ಪ್ರವೇಶ ಪತ್ರದ ಜೊತೆಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಸೂಚನೆಗಳನ್ನು ತಪ್ಪದೆ ಓದಿ.
3. **ತಪ್ಪು ಉತ್ತರಗಳಿಗೆ ಋಣಾತ್ಮಕ ಮೌಲ್ಯಮಾಪನವಿರುವುದಿಲ್ಲ.**
4. ಕೇವಲ ಕೆಸೆಟ್–2025 ಪರೀಕ್ಷೆಗೆ ಹಾಜರಾದ ಮಾತ್ರಕ್ಕೆ ಅರ್ಹತೆಯನ್ನು ಪಡೆದಿದ್ದೇನೆಂದು ಅಭ್ಯರ್ಥಿಗಳು ಭಾವಿಸಬಾರದು.
5. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು, ಮೊಬೈಲ್ ಫೋನ್, ಬ್ಲೂಟೂಥ್, ಗ್ಯಾಡ್ಜೆಟ್ಸ್, ಮಾರ್ಕರ್, ಕ್ಯಾಲ್ಕುಲೇಟರ್, ವೈಟ್ ಫ್ಲ್ಯೂಯಿಡ್, ವೈರ್‌ಲೆಸ್ ಸೆಟ್ಸ್, ಚೀಟಿಗಳು, ಪುಸ್ತಕ ಇತ್ಯಾದಿಗಳನ್ನು ಕೊಂಡೊಯ್ಯುವುದನ್ನು ನಿಷೇದಿಸಲಾಗಿದೆ.
6. ಅಲ್ಲದೆ ಈ ಮೇಲಿನ ಯಾವುದೇ ವಸ್ತುಗಳನ್ನು ಸಂರಕ್ಷಿಸಿಡಲು ಪರೀಕ್ಷಾ ಕೇಂದ್ರಗಳಲ್ಲಿ ವ್ಯವಸ್ಥೆ ಇರುವುದಿಲ್ಲ.
7. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು / ತೆಗೆದುಕೊಂಡು ಹೋಗುವಂತಿಲ್ಲ. ಪರೀಕ್ಷಾ ಮಧ್ಯಂತರದಲ್ಲಿ ಬಾರಿಸುವ ಎಚ್ಚರಿಕೆಯ ಗಂಟೆಗಳ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸುವ ಬೆಲ್ ಸಮಯವನ್ನು ನೋಡಲು ಕೋರಿದೆ.
8. ಅಭ್ಯರ್ಥಿಗಳು ಮೊಣಕೈವರೆಗೆ ಬರುವಂತಹ ಅರ್ಧ ತೋಳಿನ ಉಡುಪುಗಳನ್ನು ಧರಿಸಿ ಪರೀಕ್ಷೆಗೆ ಹಾಜರಾಗಬಹುದು, ಕಿವಿ, ತಲೆ ಮುಖ ಮುಚ್ಚುವಂತಹ ವಸ್ತ್ರವನ್ನು ನಿಷೇಧಿಸಲಾಗಿದೆ.
9. **ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸಿಕೊಂಡು ಬರುವುದನ್ನು ನಿಷೇಧಿಸಿದೆ. (ಮಂಗಳ ಸೂತ್ರ ಮತ್ತು ಕಾಲುಂಗುರವನ್ನು ಹೊರತುಪಡಿಸಿ)**
10. ಅಭ್ಯರ್ಥಿತನವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ ಎಂಬುದನ್ನು ಗಮನಿಸಬೇಕು. ಕೇವಲ ಪ್ರವೇಶ ಪತ್ರವನ್ನು ನೀಡಿದ ಮಾತ್ರಕ್ಕೆ ಹಾಗೂ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಿದ ಮಾತ್ರಕ್ಕೆ, ಪ್ರಾಧಿಕಾರವು ಅಭ್ಯರ್ಥಿಗಳ ವಿವರವನ್ನು ಒಪ್ಪಿದೆಯೆಂದು ಪರಿಗಣಿಸಬಾರದು.
11. ಪ್ರವೇಶ ಪತ್ರದ ಜೊತೆಯಲ್ಲಿ ಅಭ್ಯರ್ಥಿಯು ಕಡ್ಡಾಯವಾಗಿ ಸರ್ಕಾರದಿಂದ ಮಾನ್ಯತೆ ಇರುವ ಭಾವಚಿತ್ರವುಳ್ಳ ಯಾವುದಾದರೂ ಒಂದು ಗುರುತಿನ ಚೀಟಿ / ಡ್ರೈವಿಂಗ್ ಲೈಸೆನ್ಸ್ / ಪಾಸ್‌ಪೋರ್ಟ್ / ಆಧಾರ್ ಕಾರ್ಡ್ / ಪಾನ್ ಕಾರ್ಡ್ ಅನ್ನು ತೆಗೆದುಕೊಂಡು ಹೋಗಬೇಕು.
12. ಕೊಠಡಿ ಮೇಲ್ವಿಚಾರಕರು ನೀಡುವ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸಬೇಕು. ಸೂಚನೆಗಳನ್ನು ಪಾಲಿಸದೇ ಇರುವ ಅಭ್ಯರ್ಥಿಗಳನ್ನು ಅನ್ಯಾಯದ ವಿಧಾನವೆಂದು ಪರಿಗಣಿಸಿ ಅಂತಹ ಅಭ್ಯರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
13. ಪ್ರವೇಶ ಪತ್ರದಲ್ಲಿ ನಮೂದಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು.
14. ಪ್ರವೇಶ ಪತ್ರದಲ್ಲಿ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರವನ್ನು ಹೊರತುಪಡಿಸಿ ಬೇರೆ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ಬರೆಯಲು ಅಭ್ಯರ್ಥಿಗಳಿಗೆ ಅನುವು ಮಾಡಿಕೊಡುವುದಿಲ್ಲ.
15. ಓಎಂಆರ್ ಉತ್ತರ ಪತ್ರಿಕೆಯ ಮೇಲೆ ಅಗತ್ಯ ಮಾಹಿತಿಯನ್ನು ಹೊರತು ಪಡಿಸಿ, ಬೇರೆ ಯಾವುದೇ ಮಾಹಿತಿಯನ್ನು ಬರೆಯುವ ಕಾರಣದಿಂದ ಅಭ್ಯರ್ಥಿಯ ಗುರುತಿನ ವಿವರಗಳು ಬಹಿರಂಗವಾಗುವ ಸಾಧ್ಯತೆ ಇರುವುದರಿಂದ, ಅಥವಾ ಉತ್ತರಪತ್ರಿಕೆಯ ಮೇಲೆ ಅನುಚಿತವಾದ ಭಾಷೆಯನ್ನು ಬಳಸುವುದು ಅಥವಾ ಅನ್ಯಾಯದ ವಿಧಾನವನ್ನು ಅನುಸರಿಸುವುದು ಅಥವಾ ನಮೂದಿಸಿರುವ ಉತ್ತರಗಳನ್ನು ವಿವಿಧ ಸಾಧನಗಳಿಂದ ಹೊಡೆದು ಹಾಕುವುದು / ವೈಟ್ ಫ್ಲ್ಯೂಯಿಡ್ ಬಳಸುವುದು, ಇಂತಹ ಪ್ರಕರಣಗಳಲ್ಲಿ ಅಭ್ಯರ್ಥಿಗಳು ಅನರ್ಹತೆಯನ್ನು ಹೊಂದುತ್ತಾರೆ.
16. ಕೆಲವು ವಿಷಯಗಳ ಪ್ರಶ್ನೆಪತ್ರಿಕೆಗಳು ಇಂಗ್ಲೀಷ್/ಕನ್ನಡ ಆವೃತ್ತಿಯಲ್ಲಿ ಮುದ್ರಿತವಾಗಿರುತ್ತದೆ. ಇಂತಹ ಪ್ರಶ್ನೆಪತ್ರಿಕೆಗಳಲ್ಲಿ ಯಾವುದಾದದರು ಪ್ರಶ್ನೆಯ ಬಗ್ಗೆ ಆಕ್ಷೇಪಣೆ / ಸಂದೇಹ ಉಂಟಾದಲ್ಲಿ ಕನ್ನಡ / ಇಂಗ್ಲೀಷ್ ಭಾಗವನ್ನು ನೋಡುವುದು.
17. ವಿಶೇಷ ಚೇತನ ಅಭ್ಯರ್ಥಿಗಳಿಗೆ, ಪ್ರತಿಕೆ–I ಹಾಗೂ ಪ್ರತಿಕೆ–II ಗಳಿಗೆ ಸೇರಿ 60 ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲಾಗುವುದು. ಲಿಪಿಕಾರರ ಸಹಾಯ ಬಯಸುವ ವಿಶೇಷ ಚೇತನ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನ್ನು ಗಮನಿಸುವುದು.

XII) **ಪರೀಕ್ಷಾ ಸೂಚನೆಗಳು:**

1. ಅಭ್ಯರ್ಥಿಗಳಿಗೆ ಕೆಸೆಟ್–2025 ಪರೀಕ್ಷೆಯ ಪೂರ್ಣಮಾಹಿತಿಯನ್ನು, ಕೆಇಎ ಅಂತರ್ಜಾಲದಲ್ಲಿ (https://cetonline.karnataka.gov.in/kea/) ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ನೀಡಲಾಗಿರುತ್ತದೆ ಹಾಗೂ ಅಭ್ಯರ್ಥಿಗಳಿಗೆ ಅಂಚೆ ಮೂಲಕ ಯಾವುದೇ ಮಾಹಿತಿಯ ಪ್ರತಿಯನ್ನು ನೀಡಲಾಗುವುದಿಲ್ಲ.
2. ಮರುಮೌಲ್ಯಮಾಪನಕ್ಕೆ ಅಥವಾ ಮರು ಎಣಿಕೆಗೆ ಅವಕಾಶವಿರುವುದಿಲ್ಲ.
3. ಕೆಸೆಟ್–2025 ಪರೀಕ್ಷೆಯ ಕೀ ಉತ್ತರಗಳನ್ನು ಕೆಇಎ ಅಂತರ್ಜಾಲದಲ್ಲಿ ಪರೀಕ್ಷೆ ಮುಗಿದ ನಂತರ ಪ್ರಕಟಿಸಲಾಗುವುದು. ತಾತ್ಕಾಲಿಕ ಕೀ ಉತ್ತರಗಳಿಗೆ ತೃಪ್ತಿ ಹೊಂದದ ಅಭ್ಯರ್ಥಿಗಳು Online ನಲ್ಲಿ ಅರ್ಜಿ ಸಲ್ಲಿಸುವ ಮೂಲಕ ಆಕ್ಷೇಪಣೆ ಹಾಕಬಹುದು. ಪ್ರತಿ ಪ್ರಶ್ನೆಗೆ ರೂ.100/– ಮೊತ್ತವನ್ನು ಪಾವತಿಸಬೇಕು.

WWW.SHIKARAT.COM

4. **ಆಕ್ಷೇಪಣೆಗಳ ಮೇಲಿನ ಕೆಇಎ ನಿರ್ಧಾರವೇ ಅಂತಿಮವಾಗಿರುತ್ತದೆ ಮತ್ತು ಅಂತಿಮ ಉತ್ತರಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿ ನಂತರ ಕೆಸೆಟ್ ಫಲಿತಾಂಶವನ್ನು ಪ್ರಕಟಿಸಲಾಗುವುದು.**
5. **ಅಂತಿಮ ಕೀ ಉತ್ತರಗಳನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳು ಪುನಃ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**
6. ಎಲ್ಲಾ ವಿಷಯದಲ್ಲೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.
7. ಅರ್ಹರಾದ / ಅನರ್ಹಗೊಂಡ ಅಭ್ಯರ್ಥಿಗಳಿಗೆ ಕೆಇಎಯಿಂದ ಯಾವುದೇ ಅಂಕಪಟ್ಟಿಯನ್ನು ನೀಡುವುದಿಲ್ಲ.
8. ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಾದಲ್ಲಿ ಅದು ಯು.ಜಿ.ಸಿ.ಯ ನಿಯಮಗಳಿಗೆ ಅನುಗುಣವಾಗಿರುತ್ತದೆ.
9. ಪರೀಕ್ಷೆಗೆ ಸಂಬಂಧಪಟ್ಟ ಯಾವುದೇ ವಿವಾದಗಳಿದ್ದಲ್ಲಿ, ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ (High Court of Karnataka) ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತದೆ.

XIII) ಕೆಸೆಟ್–2025 ರ ಸಂಪೂರ್ಣ ಅರ್ಜಿ ಸಲ್ಲಿಕೆಯ ಪ್ರಕ್ರಿಯೆಯು ಆನ್‌ಲೈನ್‌ನಲ್ಲಿ ಸ್ಕ್ಯಾನ್ ಮಾಡಿದ ಛಾಯಾಚಿತ್ರಗಳ ಅಪ್‌ಲೋಡ್ ಮಾಡುವಿಕೆ, ಶುಲ್ಕ ಪಾವತಿ ಮತ್ತು ದೃಢೀಕರಣ ಪುಟದ ಮುದ್ರಣ ಪ್ರವೇಶ ಪತ್ರ ಇತ್ಯಾದಿಗಳೂ ಆನ್‌ಲೈನ್ ಮೂಲಕವೇ ಜರುಗುತ್ತವೆ. ಆದ್ದರಿಂದ ಅಭ್ಯರ್ಥಿಗಳು ಯಾವುದೇ ಪ್ರಮಾಣ ಪತ್ರಗಳು/ದಾಖಲೆಗಳನ್ನು ತಮ್ಮ ಅರ್ಹತೆಯ ಪುರಾವೆಯಾಗಿ ಅರ್ಜಿ ನಮೂನೆ ಅಥವಾ ದೃಢೀಕರಣ ಪುಟದ ಪ್ರತಿ ಇತ್ಯಾದಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸುವ ಅಗತ್ಯತೆಯಿಲ್ಲ. ಆದಾಗ್ಯೂ, ಅಭ್ಯರ್ಥಿಗಳು ತಮ್ಮ ಸ್ವಂತ ಹಿತಾಸಕ್ತಿಯಿಂದ ಪರೀಕ್ಷೆಗೆ ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಳ್ಳಬೇಕು. ಯಾವುದೇ ಹಂತದಲ್ಲಿ ಪ್ರಾಧಿಕಾರಕ್ಕೆ ಅಭ್ಯರ್ಥಿಗಳಲ್ಲಿ ಅನರ್ಹತೆ ಕಂಡುಬಂದಲ್ಲಿ, ಅವರ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುತ್ತದೆ ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಆನ್‌ಲೈನ್ ನೋಂದಣಿ ಸಮಯದಲ್ಲಿ ಅಭ್ಯರ್ಥಿಗಳು ಒದಗಿಸಿದ ಮಾಹಿತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪರಿಶೀಲಿಸುವುದಿಲ್ಲ. ಆದ್ದರಿಂದ ಅರ್ಹತಾ ಮಾನದಂಡಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಕೆಸೆಟ್–2025ಕ್ಕೆ ಅರ್ಹರಾದ ಅಭ್ಯರ್ಥಿಗಳ ಅರ್ಹತೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ.

XIV) **ಸಂಪರ್ಕಿಸುವ ವಿಳಾಸ :**

**ವಿಳಾಸ :** ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಸಂಪಿಗೆ ರಸ್ತೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು– 560012,
ದೂರವಾಣಿ: 080 – 23460460, ಇಮೇಲ್: kset2025kea@gmail.com
ವೆಬ್‌ಸೈಟ್: https://cetonline.karnataka.gov.in/kea/

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ಪರೀಕ್ಷಾ ಪ್ರಾಧಿಕಾರ.

SHIKARAT.COM

WWW.SHIKARAT.COM